# <u>ಏನು ಧನ್ಯಳೋ ಲಕುಮಿ</u>

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 179.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 54.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 135.
4. **Note:** The wordings mainly are as per Ref. 1 above. The wordings in Ref. 2 and Ref. 3 are same as in Ref. 1 except few very minor differences which are not considered here.
5. **Note:** Singer has followed these lyrics.

ರಾಗ: ತೋಡಿ ತಾಳ: ರೂಪಕ

ಏನು ಧನ್ಯಳೋ ಲಕುಮಿ
ಎಂಥಾ ಮಾನ್ಯಳೊ
ಸಾನುರಾಗದಿಂದ ಹರಿಯ
ತಾನೆ ಸೇವೆ ಮಾಡುತಿಹಳು || ಪ ||

ಕೋಟಿ ಕೋಟಿ ಭೃತ್ಯರಿರಲು
ಹಾಟಕಾಂಬರನ ಸೇವೆ
ಸಾಟಿ ಇಲ್ಲದ ಪೂರ್ಣ ಗುಣಳು
ಶ್ರೇಷ್ಠವಾಗಿ ಮಾಡುತಿಹಳು || 1 ||

ಛತ್ರ ಚಾಮರ ವ್ಯಜನ ಪರ್ಯಂಕ
ಪಾತ್ರ ರೂಪದಲ್ಲಿ ನಿಂತು
ಚಿತ್ರಚರಿತನಾದ ಹರಿಯ
ನಿತ್ಯ ಸೇವೆ ಮಾಡುತಿಹಳು || 2 ||

ಸರ್ವ ಸ್ಥಳದಿ ವ್ಯಾಪ್ತನಾದ
ಸರ್ವ ದೋಷ ರಹಿತನಾದ
ಗರುಡ ಗಮನನಾದ
ಪುರಂದರ ವಿಠ್ಠಲನ್ನ ಸೇವಿಸುವಳು     || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸಾನುರಾಗ** = ಭಕ್ತಿ ಪೂರ್ವಕ

**ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು** – ಮೊದಲ ಕಕ್ಷೆಯಲ್ಲಿರುವ ನಾರಾಯಣನಿಗೂ ಎರಡನೆಯ ಕಕ್ಷೆಯಲ್ಲಿರುವ ಲಕ್ಷ್ಮಿಗೂ ದೇಶ–ಕಾಲವ್ಯಾಪ್ತಿ ಸಮಾನವಾದುದು. ಲಕ್ಷ್ಮಿಯು ಚಿತ್‌ಪ್ರಕೃತಿ, ನಾರಾಯಣನು ಪುರುಷ. ಲಕ್ಷ್ಮಿಗೆ 'ನಿತ್ಯಪತ್ನೀಭಾವ', ಅವರಿಬ್ಬರೂ ನಿತ್ಯಾವಿಯುಕ್ತರು, ಎಂದರೆ ಎಂದಿಗೂ ಎಡೆಬಿಡೆ ಒಟ್ಟಿಗಿರುವವರು. ಪ್ರಳಯಕಾಲದಲ್ಲಿ ಕೂಡ, ಲಕ್ಷ್ಮಿಯು ವಿಷ್ಣುವಿನೊಂದಿಗೆ ಆಲಿಂಗನದಲ್ಲಿದ್ದು ಅವನಿಗೂ ಆನಂದವನ್ನು ನೀಡಿ ತಾನೂ ಆನಂದವನ್ನು ಹೊಂದುವಳು.

**ಭೃತ್ಯ** = ಆಳು, ಸೇವಕ, ದಾಸ

**ಕೋಟಿ ಕೋಟಿ ಭೃತ್ಯರಿರಲು** – ಹರಿಯ ಮಾಯಾರೂಪವಾದ ಲಕ್ಷ್ಮಿಯು ಅವನಿಂದಲೇ ಸೃಷ್ಟಿಗೆ ತೊಡಗಿ, ಅವಳ ಅನುಗ್ರಹದಿಂದಲೇ ಬ್ರಹ್ಮನು ಬ್ರಹ್ಮಾಂಡವನ್ನು ಸೃಷ್ಟಿಮಾಡುವನು; ಲಕ್ಷ್ಮಿಯು ಪರಮಾತ್ಮನ ಸಂಕಲ್ಪದಂತೆ ಬ್ರಹ್ಮಾದಿ ದೇವತೆಗಳಿಂದ ಬ್ರಹ್ಮಾಂಡದ ವ್ಯಾಪಾರವನ್ನೆಲ್ಲ ನಡೆಸುವಳು. ಮತ್ತು ಲಕ್ಷ್ಮಿಯು ಸಕಲಜೀವನಿಯಾಮಕಳು. ಆದ್ದರಿಂದ ಅವಳಿಗೆ ಬ್ರಹ್ಮನಿಂದ ಮೊದಲುಮಾಡಿಕೊಂಡು ಅಚೇತನ ಪ್ರಕೃತಿಯವರೆಗೂ ಎಲ್ಲರೂ ಭೃತ್ಯರೇ.

**ಹಾಟಕಾಂಬರ** – ಕನಕಾಂಬರ, ಬಂಗಾರ ಬಣ್ಣದ ಜರಿ ಬಟ್ಟೆ, ಹೊನ್ನನು ಹಾಕಿ ನೇಯ್ದ ಬಟ್ಟೆ, ರೇಷ್ಮೆ ವಸ್ತ್ರ ಧರಿಸಿದವನು, ಬಂಗಾರದಂತೆ ಹೊಳೆಯುವ ಪೀತಾಂಬರವನ್ನು ತೊಟ್ಟವನು, ನಾರಾಯಣ.

**ಸಾಟಿಯಿಲ್ಲದೆ** – ದೇವತಾ ತಾರತಮ್ಯದಲ್ಲಿ ಅವಳಿಗೆ ಯಾರೂ ಸಮರಾಗರು; ನಿತ್ಯ ಮುಕ್ತಿ, ನಿತ್ಯವ್ಯಾಪ್ತಿ, ದುಃಖಾಸ್ಪೃಷ್ಟಸುಖ ಅವಳಿಗಲ್ಲದೆ ಬೇರೆ ಯಾವ ದೇವತೆಗೂ ಇರದು.

**ಛತ್ರ ಚಾಮರ...–** ಅಪ್ರಾಕೃತವಾದ ವೈಕುಂಠ ಲೋಕವು ಲಕ್ಷ್ಮೀನಾರಾಯಣರ ನಿವಾಸಸ್ಥಾನ; ಅದು ನಿತ್ಯ, ಸನಾತನ. ಅಲ್ಲಿರುವ ಎಲ್ಲ ಪದಾರ್ಥಗಳೂ, ಪರಿಕರಗಳೂ, ನಗರ ವಿವರಗಳೂ ಲಕ್ಷ್ಮಿಯ ರೂಪಗಳೇ. ಈ ಎಲ್ಲ ರೂಪಗಳಿಂದ ಲಕ್ಷ್ಮಿಯು ನಾರಾಯಣನಿಗೆ ಅನನ್ಯ ಸೇವೆ ಸಲ್ಲಿಸುವಳು.

**ವ್ಯಜನ –** ಬೀಸಣಿಗೆ.

**ಪರ್ಯಂಕ –** ಮಂಚ, ಪಲ್ಲಂಗ, ಪರಿಯಂಕ

**ಚಿತ್ರಚರಿತ** – ಅಚಿಂತ್ಯ ಮಹಿಮಾದ್ಭುತ ಶಕ್ತಿಯುಳ್ಳ.

**Classification:** Keerthane
**Ankita:** purandara vittala
**Location:** NA
**Category:** Lakshmi Stuti, Pooja Tatva,
**Sub-Category:** Lakshmi, Krishna, Vishnu purna, garuda, dhanya
**Pravachana:** Vid Vitthobacharya
**Explanation:** Dr. Vijayendra Desai, Dharwad.